ಅದರ ಸದಸ್ಯರು ಮಾಡಬಾರದು. "ನಮ್ಮ ಕುಟುಂಬದ ಹಿತದಲ್ಲಿಯೇ ನಮ್ಮ ವ್ಯಕ್ತಿಗತ ಕಲ್ಯಾಣವೂ ಇದೆ" ಎಂದು ನಾವು ಮನಗಾಣಬೇಕು. ತನ್ನ ಮನೆಯ ಸಾಮಾನುಗಳನ್ನೇ ಕದ್ದು, ಹುಡುಗನೊಬ್ಬ ಮಾರಿಕೊಳ್ಳುತ್ತಿದ್ದ. ಅದರಿಂದ ಬರುವ ಹಣವನ್ನು ತನ್ನ ಸ್ವಂತ ಸುಖಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದ. ಇದು ಅಪ್ರಾಮಾಣಿಕತೆಗೆ ಒಂದು ಉದಾಹರಣೆ. ಹಾಗೆ ಮಾಡುವವರು ಕೃತಘ್ನರು. ಕುಟುಂಬವು ತಮಗೆ ದೊರಕಿಸಿಕೊಟ್ಟ ಸೌಲಭ್ಯಗಳನ್ನು ಬಳಸಿಕೊಂಡೂ, ಅದಕ್ಕೇ ದ್ರೋಹ ಬಗೆವ ವಂಚಕರು. ಇಂಥ ಜನರಿರುವ ಕುಟುಂಬವು ಒಡೆದುಹೋಗುತ್ತದೆ; ಕಲಹ ಮತ್ತು ಮನಸ್ತಾಪಗಳ ಗೂಡಾಗುತ್ತದೆ. ಇದನ್ನು ತಡೆಯುವ, ಆ ಮೂಲಕ ನಮ್ಮ ಮನೆಯ ಕೌಟುಂಬಿಕ ರಚನೆಯನ್ನು ಸಶಕ್ತಗೊಳಿಸುವ ಜವಾಬ್ದಾರಿ ಎಲ್ಲರ ಮೇಲೂ ಇರುತ್ತದೆ. ದೊಡ್ಡವರು ಚಿಕ್ಕವರಿಗೆ ಇದನ್ನು ಹೇಳಿಕೊಡಬೇಕು. ಚಿಕ್ಕವರು ಅದನ್ನು ಪಾಲಿಸಬೇಕು. ದೊಡ್ಡವರು ತಾವೇ ಈ ವಿಷಯದಲ್ಲಿ ಆದರ್ಶಪ್ರಾಯವಾಗಿ ನಡೆದುಕೊಳ್ಳಬೇಕು.

### ಪ್ರೀತಿಯ ಪ್ರಕಾರಗಳು

ಕುಟುಂಬದಲ್ಲಿ ಕಂಡುಬರುವ ಪ್ರೀತಿಯಲ್ಲಿ ಮುಖ್ಯವಾಗಿ ನಾಲ್ಕು ಪ್ರಕಾರಗಳಿವೆ. ಅವುಗಳ ಮೇಲೆಯೇ ಸಂಸಾರದ ಸೌಧ ನಿಂತಿದೆ ಎನ್ನಬಹುದು. ಆಗ ಮಾತ್ರ ನಮ್ಮ ಮನೆಯು 'ಪ್ರೇಮಾಲಯ' ವಾಗುತ್ತದೆ. ಆ ನಾಲ್ಕು ಬಗೆಯ ಪ್ರೀತಿಯನ್ನು ರಕ್ಷಿಸಿಕೊಂಡು, ಸಶಕ್ತಗೊಳಿಸುವಲ್ಲೇ ಕುಟುಂಬದ ಹಿತ ಮಾತ್ರವಲ್ಲ, ಅಸ್ತಿತ್ವವೂ ಅಡಗಿದೆ.

**೧. ವಾತ್ಸಲ್ಯ :** ಕುಟುಂಬದ ಸಾಮರಸ್ಯವನ್ನು ಕಾಪಾಡುವಲ್ಲಿ ಮಕ್ಕಳಿಗಿಂತ ಹಿರಿಯರ ಪಾತ್ರವೇ ಅತ್ಯಂತ ಗುರುತರವಾದದ್ದು. ಅವರು ಸಹನಾಮೂರ್ತಿಗಳಾಗಿರಬೇಕು. ಮಕ್ಕಳ ಮೇಲೆ ಅನುಕಂಪದ ಹೊಳೆಯನ್ನು ಹರಿಸಬೇಕು. ತಪ್ಪನ್ನು ತಿದ್ದುವಾಗ, ಶಿಕ್ಷಿಸುವಾಗ ಮಕ್ಕಳ ಘನತೆಗೆ ಆಘಾತವಾಗದಂತೆ ಎಚ್ಚರವಹಿಸಬೇಕು. ಎಂಥ ಸಂದರ್ಭದಲ್ಲಿಯೂ ಮಾನಸಿಕ ಸ್ತಿಮಿತವನ್ನು ಕಳೆದುಕೊಂಡು, ಮಕ್ಕಳ ಎದುರಿಗೆ ಅನುಚಿತವಾಗಿ ವರ್ತಿಸಬಾರದು. ಎಲ್ಲಕ್ಕಿಂತ ಹೆಚ್ಚಾಗಿ, ವಾತ್ಸಲ್ಯಪೂರ್ಣರಾಗಿ ಇರಬೇಕು. ವಾತ್ಸಲ್ಯವೆಂಬುದು ಯಾರೂ ಹೇಳಿಕೊಡುವ ಗುಣವಲ್ಲ. ಅದನ್ನು ಹರಿಸುವವನು, ಪಡೆದುಕೊಳ್ಳುವವನು ಮಾತ್ರವೇ ಅನುಭವಿಸಲು ಸಾಧ್ಯ. ನಾವು ಮಕ್ಕಳಿಗೆ ತಂದುಕೊಡುವ ಚಾಕಲೇಟು, ಆಟದ ಸಾಮಾನು, ತಿಂಡಿ ಇಂಥವುಗಳಲ್ಲಿ ವಾತ್ಸಲ್ಯ ಇರುವುದಿಲ್ಲ. ಅದನ್ನು ಕೊಡುವಾಗ ಇರುವ ನಮ್ಮ ಮನಃಸ್ಥಿತಿ, ನಾವು ತೋರುವ ಹಾವಭಾವ, ಮಾತುಕಥೆ – ಇವುಗಳಲ್ಲಿ ವಾತ್ಸಲ್ಯವು ಪ್ರಕಟವಾಗುತ್ತದೆ. ಅವನ್ನು ಮಕ್ಕಳು ಗಮನಿಸಿ, ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆಯೇ ಹೊರತು, ನೀವು ಕೊಡುವ ವಸ್ತು ಅವಕ್ಕೆ  ಮುಖ್ಯವಲ್ಲ. ಉದಾಹರಣೆಗೆ, ಕೋಪಿಸಿಕೊಂಡು ತಿಂಡಿಕೊಟ್ಟರೆ, ಮಕ್ಕಳ ಗಂಟಲಲ್ಲಿ ಅದು ಹೇಗೆ ತಾನೇ ಇಳಿಯುತ್ತದೆ?  ಮಕ್ಕಳಿಗೆ ನಾವು ಕೊಡಬಹುದಾದ ಅತ್ಯಂತ ಅಮೂಲ್ಯ ಕೊಡುಗೆಯೆಂದರೆ ಈ ವಾತ್ಸಲ್ಯವೇ. ಅದನ್ನು ಅಂಗಡಿಯಿಂದ ತರಬೇಕಾದ್ದಿಲ್ಲ. ಅದು ನಮ್ಮ ಅಂತರಂಗದಲ್ಲಿಯೇ ಇದೆ. ಆದರೆ, ಕೋಪ, ಅಸಹನೆ ಮುಂತಾದ ಕೆಟ್ಟ ಭಾವನೆಗಳು ಅದು ಸರಾಗವಾಗಿ ಹರಿದುಬರುವುದಕ್ಕೆ ಅಡ್ಡಿಯಾಗುತ್ತವೆ. ಅವುಗಳನ್ನು ನಿಯಂತ್ರಿಸಿಕೊಂಡರೆ, ನಮ್ಮಲ್ಲಿರುವ ವಾತ್ಸಲ್ಯವನ್ನು ಮಕ್ಕಳು ಸಹಜವಾಗಿ ತಾವಾಗಿಯೇ  ಗುರುತಿಸುತ್ತಾರೆ. ಆಗ ಅವರಿಗೆ 'ನಾವು' ಬೇಕಾಗುತ್ತೇವೆಯೇ ಹೊರತು, ನಮ್ಮ 'ಹಣ', 'ಕೊಡುಗೆ', 'ತಿಂಡಿ' – ಇವುಗಳು ಮುಖ್ಯವಾಗುವುದಿಲ್ಲ. ಆಗ ಅವರಿಗೆ ಅಂಥ ಚಿಕ್ಕ ಪುಟ್ಟ ಸಂಗತಿಗಳು ಬೇಕೇ ಬೇಕು ಎಂದೂ ಅನಿಸುವುದಿಲ್ಲ.

**೨. ಗೌರವಾದರ :** ತಂದೆತಾಯಿಯರು ತೋರುವ ವಾತ್ಸಲ್ಯಕ್ಕೆ ಪ್ರತಿಯಾಗಿ ಮಕ್ಕಳು ಅವರಿಗೆ ಗೌರವಾದರಗಳನ್ನು ನೀಡುತ್ತಾರೆ. ಈ ಪರಸ್ಪರ ಪ್ರೀತ್ಯಾದರಗಳು ಯಾವ ಅಡೆತಡೆಯೂ ಇಲ್ಲದೆ, ಸರಾಗವಾಗಿ ನಡೆದರೆ ಮಾತ್ರ ಕೌಟುಂಬಿಕ ಸಾಮರಸ್ಯ ಸಾಧ್ಯ. ತಾವು ಮಕ್ಕಳಿಗಾಗಿ ಮಾಡುವ ತ್ಯಾಗಕ್ಕೆ ತಂದೆತಾಯಿಗಳು ಅಪೇಕ್ಷಿಸುವುದು ಇದನ್ನೇ. ಇದು ಅವರಿಗೆ ದೊರಕದಿದ್ದಾಗ, ಅವರ ಮನಸ್ಸಿಗೆ ತುಂಬ ನೋವುಂಟಾಗುತ್ತದೆ. ವಯಸ್ಸಾದಂತೆಲ್ಲ, ದೇಹ ಶಿಥಿಲವಾಗಿ, ಈ ಮಾನಸಿಕ ಕೊರಗು ತೀವ್ರವಾಗುತ್ತಲೇ ಹೋಗುತ್ತದೆ. ಆದ್ದರಿಂದ ಮಕ್ಕಳು ತಮ್ಮ ತಂದೆತಾಯಿಯರಿಗೆ ವಿಧೇಯರಾಗಿ ನಡೆದುಕೊಳ್ಳಬೇಕು. ಅಪ್ಪಅಮ್ಮಂದಿರ ಮೇಲಿನ ತಮ್ಮ ಪ್ರೇಮವನ್ನು, ಗೌರವಾದರದ ಮೂಲಕ ವ್ಯಕ್ತಪಡಿಸಬೇಕು. ಅವರ ಮುಂದೆ ಒರಟಾಗಿ ನಡೆದುಕೊಳ್ಳುವುದು, ಕೋಪಗೊಳ್ಳುವುದು, ಅಸಹ್ಯವಾಗಿ ಹಾವಭಾವ ಮಾಡುವುದು – ಇವೆಲ್ಲ ಅನುಚಿತವಾದದ್ದು.  ತಂದೆತಾಯಿಯರನ್ನು ದೇವರಂತೆ ಕಾಣು ಎಂದು ಉಪನಿಷತ್ತುಗಳು ಹೇಳುತ್ತವೆ. ಅಪ್ಪ ಅಮ್ಮಂದಿರನ್ನು  ಅಗೌರವದಿಂದ ಕಾಣುವ ವ್ಯಕ್ತಿ  ಯಾವುದೇ ರೀತಿಯಲ್ಲಿ ಯಶಸ್ಸನ್ನೂ, ಸಂತೋಷವನ್ನೂ ಪಡೆಯಲು ಸಾಧ್ಯವಾಗುವುದಿಲ್ಲ. ನಮ್ಮ ಜೀವನವು ಸರ್ವಾಂಗಸುಂದರವಾಗಿರುವುದಕ್ಕೆ ನಮ್ಮ ಮಾತಾಪಿತೃಗಳ ಆಶೀರ್ವಾದ ಬೇಕೇ ಬೇಕು. ಅವರ ಮನಸ್ಸಿಗೆ ನೋವುಂಟುಮಾಡಿ ನಾವು ಯಾವ ಪುರುಷಾರ್ಥವನ್ನೂ ಸಾಧಿಸಲು ಆಗುವುದಿಲ್ಲ. ಆದ್ದರಿಂದ ಮಕ್ಕಳು, ತಮ್ಮ ತಂದೆತಾಯಿಗಳು ತಮಗೆ ನೀಡಿದ ಪ್ರೀತಿ, ಮಾಡಿದ ತ್ಯಾಗ – ಇವನ್ನು

ನೆನೆಸಿಕೊಂಡು, ಅದಕ್ಕಾಗಿ ಜೀವನವಿಡೀ ಕೃತಜ್ಞರಾಗಿರಬೇಕು. ಇಳಿವಯಸ್ಸಿನಲ್ಲಿ ಅವರನ್ನು ಚೆನ್ನಾಗಿ ನೋಡಿಕೊಳ್ಳುವ ಮೂಲಕ, ಅವರಿಗೆ ಸುರಕ್ಷತೆಯ ಭಾವನೆಯನ್ನು ಮೂಡಿಸುವ ಮೂಲಕ ಆ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕು. ಇಷ್ಟನ್ನೂ ಮಾಡದ ಒಬ್ಬ ವ್ಯಕ್ತಿ ಪ್ರಾಣಿಗೆ ಸಮಾನನೇ ಸರಿ.

**೩. ಸ್ನೇಹಭಾವ :** ಇದು ಗಂಡಹೆಂಡಿರ ನಡುವೆ ಇರಬೇಕಾದ ಅನ್ಯೋನ್ಯತೆ. ಈಗಿನ ಆಧುನಿಕ ಯುಗದಲ್ಲಿ ಅತ್ಯಂತ ಆಘಾತಕ್ಕೆ ಒಳಗಾಗುತ್ತಿರುವ ಸಂಬಂಧವೆಂದರೆ ಗಂಡ ಮತ್ತು ಹೆಂಡತಿಯರ ಸಂಬಂಧ. ಭಾರತೀಯ ಪರಂಪರೆಯು ಕೇವಲ ಶಾರೀರಿಕ ಕಾಮನೆಗಳಿಗಿಂತ ಉನ್ನತ ಮಟ್ಟದ ಕೌಟುಂಬಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಆಯಾಮವನ್ನು ಈ ಸಂಬಂಧಕ್ಕೆ ಕಲ್ಪಿಸಿತ್ತು. ಹೀಗಾಗಿ ದಂಪತಿಗಳಿಗೆ ತಮ್ಮ ವೈಯಕ್ತಿಕ ಸುಖಕ್ಕಿಂತ ಮಿಗಿಲಾದ ಜವಾಬ್ದಾರಿಗಳು ಇದ್ದವು. ತಂದೆ, ತಾಯಿ, ಅಣ್ಣ, ತಮ್ಮ, ಮಕ್ಕಳು, ಅತ್ತೆ, ಮಾವ ಮೊದಲಾದವರು ಕೂಡಿಕೊಂಡಿರುವ ಸಂಯುಕ್ತ ಕುಟುಂಬದ ಯೋಗಕ್ಷೇಮವೇ ಇದರಲ್ಲಿ ಪ್ರಧಾನವಾಗಿತ್ತು. ಅದಲ್ಲದೆ, ವಿವಾಹವು ಮೂಲತಃ ಒಂದು ಧಾರ್ಮಿಕ ಪ್ರಕ್ರಿಯೆಯಾಗಿದ್ದು, ಆಧ್ಯಾತ್ಮಿಕ ಮೌಲ್ಯಗಳನ್ನು ಉದ್ದೇಶವಾಗಿ ಹೊಂದಿತ್ತು. ಅಭ್ಯುದಯದ (ಐಹಿಕ ಸುಖ) ಜೊತೆಗೆ ನಿಃಶ್ರೇಯಸ (ಆಧ್ಯಾತ್ಮಿಕ ಉನ್ನತಿ) ಕೂಡ ವೈವಾಹಿಕ ಸಂಬಂಧದ ಲಕ್ಷ್ಯವಾಗಿತ್ತು. ಹೀಗಾಗಿ ಅಂಥ ಸಂಬಂಧವು ದೃಢವಾಗಿ ಇರುತ್ತಿತ್ತು. ಕಷ್ಟ, ವೈಮನಸ್ಯಗಳು ಈ ಸಂಬಂಧವನ್ನು ಅಷ್ಟು ಬೇಗ ಹಾಳುಮಾಡುತ್ತಿರಲಿಲ್ಲ. ಏಕೆಂದರೆ ಅದರಲ್ಲಿ ಸಮಷ್ಟಿಯ ಹಿತ, ವ್ಯಕ್ತಿಗತ ಹಿತದೊಂದಿಗೆ ಸಮರಸವಾಗಿತ್ತು; ಲೌಕಿಕ ಆಕಾಂಕ್ಷೆಯು ತನ್ನ ಪರಿಧಿಯನ್ನು ಮೀರಿ, ಪಾರಮಾರ್ಥಿಕ ಚಿಂತನೆಯ ಆಯಾಮವನ್ನು ಪಡೆದುಕೊಂಡಿತ್ತು.

ಆದರೆ ಈಗಿನ ಕಾಲದ ವೈವಾಹಿಕ ಸಂಬಂಧವು ಅನುಕೂಲಕ್ಕಾಗಿ ಕಲ್ಪಿಸಿದ ಗುತ್ತಿಗೆಯಂತಿದೆ (contract). ದಂಪತಿಗಳು ಪರಸ್ಪರ ಸುಖಾವಲಂಬಿಗಳಾಗಿರುತ್ತಾರೆ. ಸ್ವಂತ ಲಾಭಾಕಾಂಕ್ಷೆಗಳೇ ಈ ಸಂಬಂಧದಲ್ಲಿ ಪ್ರಧಾನವಾಗಿರುತ್ತವೆ. ಗಂಡ ಮತ್ತು ಹೆಂಡತಿ ತಮ್ಮ ವೈಯಕ್ತಿಕ ಮಹತ್ವಾಕಾಂಕ್ಷೆಗಳ ಸಾಧನೆಗೇ ಹೆಚ್ಚಿನ ಮಹತ್ವ ಕೊಡುತ್ತಾರೆಯೇ ಹೊರತು, ವೈವಾಹಿಕ ಸಂಬಂಧವನ್ನು ಹೆಚ್ಚು ಪರಿಪುಷ್ಟವಾಗಿ ಮಾಡಿಕೊಳ್ಳುವ ಕಡೆ ಅವರ ಗಮನ ಇರುವುದಿಲ್ಲ. ಉದ್ಯೋಗದಲ್ಲಿ ಯಶಸ್ಸು ಮತ್ತು ಅಧಿಕಾಧಿಕ ಧನಾರ್ಜನೆ – ಇವೇ ಒಂದು ಕುಟುಂಬದ ಮೌಲ್ಯಗಳಾದಾಗ, ದಂಪತಿಗಳ ನಡುವಣ ಸಾಮರಸ್ಯ ಕ್ರಮೇಣ ಬಿರುಕು ಬೀಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಹೀಗೆ ಆಗದಂತೆ ಕಾಪಾಡಿಕೊಳ್ಳುವ ಜವಾಬ್ದಾರಿ ಗಂಡ ಮತ್ತು ಹೆಂಡತಿ ಇಬ್ಬರ ಮೇಲೂ ಇದೆ. ಇಬ್ಬರ ಹಿತವೂ ಇದರಲ್ಲೇ ಅಡಗಿದೆ. ಕುಟುಂಬದ ಒಗ್ಗಟ್ಟೂ ಇದರ ಮೇಲೆಯೇ ನಿಂತಿದೆ.

**೪. ಸೌಹಾರ್ದ :** ಕೆಲವೊಮ್ಮೆ ಗಂಡ ಹೆಂಡತಿ, ಮಕ್ಕಳಲ್ಲದೆ ಇತರ ಬಂಧುಗಳೂ ಮನೆಯಲ್ಲಿ ವಾಸಿಸುತ್ತಿರುತ್ತಾರೆ. ವಯಸ್ಸಾದ ತಂದೆತಾಯಿಯರು, ಆಶ್ರಯವನ್ನು ಅರಸಿ ಬಂದಿರುವ ನಾದಿನಿ, ಮೈದುನ, ಸೋದರಳಿಯ, ಅಕ್ಕ, ತಮ್ಮ ಮುಂತಾದವರು ಈ ವರ್ಗಕ್ಕೆ ಸೇರುತ್ತಾರೆ. ಅವರು ಒಟ್ಟು ಕುಟುಂಬದ ಸುಖ ಸಮೃದ್ಧಿಗಳಿಗೆ, ಶಾಂತಿ ಸುಖ ನೆಮ್ಮದಿಗಳಿಗೆ ತಮ್ಮ ಕೈಲಾದಷ್ಟು ಕೊಡುಗೆಯನ್ನು ನೀಡಬೇಕು. ಇಂಥವರು ಕುಟುಂಬದವರ ಮೇಲೆ ಅಸೂಯೆ ದ್ವೇಷಗಳನ್ನು ಬೆಳೆಸಿಕೊಂಡು, ಅವರ ನಡುವೆ ಬಿರುಕು ಉಂಟುಮಾಡುವ ಕಾರ್ಯವನ್ನು ಮಾಡಿರುವ ಹಲವಾರು ನಿದರ್ಶನಗಳಿವೆ. ಹಾಗೆ ಮಾಡಬಾರದು. ಈ ಬಂಧುಗಳು ಹಾಲು ಜೇನು ಸೇರಿದಂತೆ, ಮನೆಯವರೊಡನೆ ಕೂಡಿಕೊಂಡು, ಸೌಹಾರ್ದದಿಂದ ಬಾಳಬೇಕೇ ಹೊರತು, ಆಶ್ರಯವಿತ್ತ ಮನೆಗೆ ಆತಂಕವನ್ನು ತರಬಾರದು.

**ಉಪಸಂಹಾರ**

ಕೃಷ್ಣನೇ ಗೋಕುಲದ ಮಕ್ಕಳೂ, ಕರುಗಳೂ ಆಗಿಬಿಟ್ಟಾಗ, ತಾಯಂದಿರು ಮತ್ತು ಗೋವುಗಳಿಗೆ, ಅವುಗಳ ಮೇಲೆ ಪ್ರೇಮವು ಅಧಿಕವಾಗುತ್ತಲೇ ಹೋಯಿತು. ಹಾಗೆಯೇ ನಮ್ಮ ಕುಟುಂಬದಲ್ಲಿಯೂ ಭಗವಂತನ ಭಾವವನ್ನು ನಾವು ಉದ್ದೀಪನಗೊಳಿಸಿಕೊಂಡಾಗ ಸಹಜವಾಗಿಯೇ ಪರಸ್ಪರ ಅನ್ಯೋನ್ಯತೆ ಹೆಚ್ಚಾಗುತ್ತಾ ಹೋಗುತ್ತದೆ. ಅದಕ್ಕಾಗಿ ಮಕ್ಕಳಿಗೆ ನೈತಿಕ ಮತ್ತು ಆಧ್ಯಾತ್ಮಿಕ ವಿಚಾರಗಳಲ್ಲಿ ಶಿಕ್ಷಣ ನೀಡಬೇಕು. ಮನೆಯಲ್ಲಿ ಭಗವದ್ಭಕ್ತಿಯ ವಾತಾವರಣವನ್ನು ನಿರ್ಮಿಸಬೇಕು. ಪೂಜೆ, ಪ್ರಾರ್ಥನೆ, ಸ್ತೋತ್ರಪಾರಾಯಣ, ಭಜನೆ, ಉತ್ತಮ ಗ್ರಂಥಗಳ ಪಠಣ, ಸಾಧುಸಂತರ ಮತ್ತು ದೀನದಲಿತರ ಸೇವೆ – ಇವೆಲ್ಲಾ ಕುಟುಂಬವನ್ನು ನಂದನವನವನ್ನಾಗಿಸುತ್ತವೆ. ಒಟ್ಟಿನಲ್ಲಿ ಯಾವ ಕುಟುಂಬದ ಸದಸ್ಯರು ನಿಃಸ್ವಾರ್ಥಿಗಳೂ ಆಧ್ಯಾತ್ಮಿಕ ಜೀವಿಗಳೂ ಆಗಿರುತ್ತಾರೋ ಅದು ಮಾತ್ರ 'ಆದರ್ಶ ಕುಟುಂಬ' ವಾಗಬಲ್ಲದು. ನಮ್ಮದೂ ಹಾಗೆ ಆಗಬಾರದೇಕೆ? •

# ಗೃಹಸ್ಥ ಧರ್ಮ

ಸ್ವಾಮಿ ವಿವೇಕಾನಂದ



ಹಿಂದೂ ಶಾಸ್ತ್ರರೀತಿಯಾಗಿ ಕರ್ಮಕ್ಷೇತ್ರದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ, ಒಟ್ಟು ಮನುಷ್ಯವರ್ಗಕ್ಕೆ ಸಾಮಾನ್ಯವಾಗಿರುವ ಕರ್ತವ್ಯಗಳಲ್ಲದೆ, ವಿಶೇಷ ಕರ್ತವ್ಯಗಳೂ ಉಂಟು. ಹಿಂದುವು, ಬ್ರಹ್ಮಚಾರಿಯಾಗಿ ಜೀವನಯಾತ್ರೆಯನ್ನು ಮೊದಲು ಮಾಡುತ್ತಾನೆ. ತರುವಾಯ ಮದುವೆ ಮಾಡಿಕೊಂಡು ಗೃಹಸ್ಥನಾಗುತ್ತಾನೆ. ವಯಸ್ಸಾದ ಮೇಲೆ ನಿವೃತ್ತನಾಗುತ್ತಾನೆ. ಕೊನೆಯಲ್ಲಿ ಪ್ರಪಂಚವನ್ನು ತ್ಯಜಿಸಿ ಸಂನ್ಯಾಸಿಯಾಗುತ್ತಾನೆ. ಈ ಪ್ರತಿಯೊಂದು ಆಶ್ರಮಕ್ಕೂ ಕೆಲವು ಕರ್ತವ್ಯಗಳು ಉಂಟು.

ಈ ಆಶ್ರಮಗಳಲ್ಲಿ ಯಾವುದೊಂದೂ ಇತರ ಆಶ್ರಮಗಳಿಗಿಂತ ತತ್ತ್ವತಃ ಹೆಚ್ಚಲ್ಲ. ಧಾರ್ಮಿಕ ಕರ್ಮದಲ್ಲಿ ನಿರತನಾದ ಬ್ರಹ್ಮಚಾರಿಯ ಜೀವನವು ಎಷ್ಟು ಮಹತ್ವಪೂರ್ಣವಾದುದೋ, ಗೃಹಸ್ಥನ ಜೀವನವೂ ಅಷ್ಟೇ ಮಹತ್ವಪೂರ್ಣವಾದುದು. ಸಿಂಹಾಸನಾರೂಢನಾದ ರಾಜನು ಎಷ್ಟು ದೊಡ್ಡವನೋ, ರಸ್ತೆ ಗುಡಿಸುವವನು ಕೂಡ ಅಷ್ಟೇ ದೊಡ್ಡವನು. ರಾಜನನ್ನು ಸಿಂಹಾಸನದಿಂದ ಇಳಿಸಿ, ಆತನಿಗೆ ಬೀದಿ ಗುಡಿಸುವ ಕಾರ್ಯವನ್ನು ನಿಯಮಿಸಿ; ಆತನು ಆ ಕಾರ್ಯವನ್ನು ಹೇಗೆ ಮಾಡುವನೋ ನೋಡಿ. ರಸ್ತೆ ಗುಡಿಸುವವನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ, ಅವನು ಹೇಗೆ ಒಡೆತನವನ್ನು ನಡೆಸುವನೋ ನೋಡಿರಿ. ಪ್ರಪಂಚವನ್ನು ಬಿಟ್ಟವನು ಪ್ರಪಂಚದೊಳಗೆ ಇರುವವನಿಗಿಂತ ದೊಡ್ಡವನೆಂದು ಹೇಳುವುದು ನಿರರ್ಥಕ. ಪ್ರಪಂಚದಲ್ಲಿದ್ದೂ ಈಶ್ವರಭಜನೆಯನ್ನು ಮಾಡುವುದು, ಪ್ರಪಂಚವನ್ನು ಬಿಟ್ಟು ಮನಬಂದಂತೆ ಸುಲಭಜೀವನವನ್ನು ನಡೆಯಿಸಿಕೊಂಡು ಹೋಗುವುದಕ್ಕಿಂತಲೂ ಕಠಿಣಕರ. ಭಾರತ ದೇಶದಲ್ಲಿ ನಾಲ್ಕು ಆಶ್ರಮಗಳು ಈಚೆಗೆ ಎರಡಕ್ಕಿಳಿದಿವೆ – ಗೃಹಸ್ಥಾಶ್ರಮ, ಸಂನ್ಯಾಸಾಶ್ರಮ. ಗೃಹಸ್ಥನು ಮದುವೆ ಮಾಡಿಕೊಂಡು ಪೌರನ ಕರ್ತವ್ಯಗಳನ್ನು ನಡೆಸುತ್ತಾನೆ. ಸಂನ್ಯಾಸಿಯ ಕರ್ತವ್ಯವೇನೆಂದರೆ, ಧರ್ಮಕಾರ್ಯದಲ್ಲಿ ತನ್ನ ಸರ್ವಶಕ್ತಿಯನ್ನೂ ವಿನಿಯೋಗಿಸಿ, ಈಶ್ವರೋಪಾಸನೆಯನ್ನು ಮಾಡುತ್ತ ಭಗವದ್ವಿಷಯವನ್ನು ಬೋಧಿಸುವುದು. ಈ ವಿಷಯಗಳು ಉಕ್ತವಾಗಿರುವ 'ಮಹಾನಿರ್ವಾಣ ತಂತ್ರ' ಎಂಬ ಗ್ರಂಥದಿಂದ ಕೆಲವು ವಾಕ್ಯಗಳನ್ನು ಓದುತ್ತೇನೆ. ಓರ್ವನು ಗೃಹಸ್ಥನಾಗಿದ್ದು ತನ್ನ ಕರ್ತವ್ಯಗಳನ್ನೆಲ್ಲಾ ಸಾಂಗವಾಗಿ ನೆರವೇರಿಸುವುದು ಎಷ್ಟು ಕಷ್ಟವಾದ ಕೆಲಸವೆಂಬುದನ್ನು ಇದರಿಂದ ನೀವು ಗ್ರಹಿಸುವಿರಿ:

ಗೃಹಸ್ಥನು ಈಶ್ವರನಿರತನಾಗಿರಬೇಕು. ಈಶ್ವರ ಜ್ಞಾನಲಾಭವೇ ಆತನ ಧ್ಯೇಯವಾಗಿರಬೇಕು. ಆದರೂ ಆತನು ಸದಾಕಾಲದಲ್ಲಿಯೂ ಕೆಲಸದಲ್ಲಿ ನಿರತನಾಗಿರಬೇಕು. ತನ್ನ ಕರ್ತವ್ಯಗಳನ್ನೆಲ್ಲ ಮಾಡಬೇಕು. ತನ್ನ ಕರ್ಮಫಲಗಳನ್ನು ಈಶ್ವರನಿಗೆ ಅರ್ಪಿಸಬೇಕು.

ಕರ್ಮ ಮಾಡಿ ಅದರ ಫಲವನ್ನು ನಿರಾಕರಿಸುವುದೂ, ಓರ್ವನಿಗೆ ಸಹಾಯ ಮಾಡಿ ಅವನು ತನಗೆ ಕೃತಜ್ಞನಾಗಿರಬೇಕೆಂದು ಚಿಂತಿಸದೆ ಇರುವುದೂ, ಏನಾದರೂ ಒಂದು ಒಳ್ಳೆಯದನ್ನು ಮಾಡಿ ಅದರಿಂದ ಹೆಸರು ಕೀರ್ತಿಗಳು ಬರುತ್ತವೆಯೇ ಇಲ್ಲವೇ ಎಂಬುದನ್ನು ಎಣಿಸದೆ ಇರುವುದೂ, ಈ ಪ್ರಪಂಚದಲ್ಲಿ ಅತ್ಯಂತ ಕಠಿಣ ಕಾರ್ಯ. ಪ್ರಪಂಚ ಹೊಗಳಿದರೆ, ಬಲು ಹೇಡಿಯೂ ಕೂಡ ಕಲಿಯಾಗುವನು. ಆದರೆ ಇತರರ ಶ್ಲಾಘನೆಯನ್ನು ಲೆಕ್ಕಿಸದೆ ಸತತವೂ ಒಳ್ಳೆಯದನ್ನು ಮಾಡುವುದೀಗ ಮನುಷ್ಯನೆಸಗುವ ಪರಮಶ್ರೇಷ್ಠವಾದ ಯಜ್ಞ. ಜೀವನೋಪಾಯವನ್ನು ಸಂಪಾದಿಸುವುದು ಗೃಹಸ್ಥನ ದೊಡ್ಡ ಕರ್ತವ್ಯ. ಆದರೆ ಆತನು ಸುಳ್ಳು ಹೇಳುವುದರಿಂದಲೂ, ಮೋಸಮಾಡುವುದರಿಂದಲೂ, ಇತರರ

ಸ್ವಾಮಿ ವಿವೇಕಾನಂದರ 'ಕರ್ಮಯೋಗ' ಗ್ರಂಥದಲ್ಲಿ ಗೃಹಸ್ಥರ ಕರ್ತವ್ಯಗಳ ಬಗ್ಗೆ ಇರುವ ಭಾಗವನ್ನು ಇಲ್ಲಿ ಪ್ರಕಟಿಸಲಾಗಿದೆ. ಸಂನ್ಯಾಸ ಧರ್ಮದಷ್ಟೇ ಗೃಹಸ್ಥ ಧರ್ಮವೂ ಶ್ರೇಷ್ಠವಾದದು ಎಂಬ ಪ್ರತಿಪಾದನೆ ಇಲ್ಲಿದೆ. ನಿಸ್ವಾರ್ಥತೆಯೇ ಗೃಹಸ್ಥ ಧರ್ಮದ ತಿರುಳು, ಇದರಿಂದ ಮಾತ್ರ ಕುಟುಂಬಜೀವನದ ಸಾರ್ಥಕತೆ ಸಾಧ್ಯ ಎಂಬ ಅಂಶವನ್ನೂ ಸ್ವಾಮೀಜಿ ಇಲ್ಲಿ ವಿವರಿಸಿದ್ದಾರೆ.

ಸ್ವತ್ತನ್ನು ಅಪಹರಿಸುವುದರಿಂದಲೂ, ಅದನ್ನು ಗಳಿಸದಂತೆ ನೋಡಿಕೊಳ್ಳಬೇಕು. ತನ್ನ ಜೀವನವು ಈಶ್ವರ ಸೇವೆ, ಬಡವರ ಸೇವೆ – ಇವಕ್ಕಾಗಿಯೇ ಎಂಬುದನ್ನು ಆತನು ಜ್ಞಾಪಕದಲ್ಲಿಡಬೇಕು.

ತಾಯಿತಂದೆಗಳು ಈಶ್ವರನ ಸಾಕ್ಷಾತ್ ಪ್ರತಿನಿಧಿಸ್ವರೂಪರೆಂಬುದನ್ನು ಗೃಹಸ್ಥನು ತಿಳಿದು, ಸತತವೂ, ಸರ್ವಪ್ರಯತ್ನದಿಂದಲೂ ಅವರನ್ನು ಸಂತೋಷಗೊಳಿಸಬೇಕು. ತಾಯಿತಂದೆಗಳಿಬ್ಬರಿಗೂ ಸಂತೋಷವಾದರೆ ದೇವರಿಗೆ ಆತನಲ್ಲಿ ಸಂತೋಷ. ತಂದೆತಾಯಿಗಳಿಗೆ ಬಿರುನುಡಿಯನ್ನು ಆಡದ ಮಗುವೇ ನಿಜವಾಗಿಯೂ ಒಳ್ಳೆಯ ಮಗು.

ಮಾತಾಪಿತೃಗಳೆದುರಿಗೆ ಹಾಸ್ಯ ಮಾಡಕೂಡದು; ಚಾಂಚಲ್ಯವನ್ನು ತೋರಿಸಬಾರದು; ಕೋಪಗೊಳ್ಳಬಾರದು. ತಾಯಿತಂದೆಗಳ ಮುಂದೆ ಮಗುವು ಗೌರವದಿಂದ ಬಾಗಿ ಅವರೆದುರಿಗೆ ನಿಂತುಕೊಳ್ಳಬೇಕು, ಅವರು ಹೇಳುವವರೆಗೆ ಕುಳಿತುಕೊಳ್ಳಬಾರದು.

ತನ್ನ ತಾಯಿತಂದೆಗಳು, ತನ್ನ ಮಕ್ಕಳು, ತನ್ನ ಹೆಂಡತಿ, ಬಡವರು – ಇವರಿಗೆ ಮೊದಲು ಅನ್ನಪಾನವಸ್ತ್ರಾದಿಗಳನ್ನು ಕೊಡದೆ, ತಾನು ಮೊದಲು ಇವುಗಳನ್ನು ಸ್ವೀಕರಿಸುವ ಗೃಹಸ್ಥನು ಪಾಪವನ್ನಾಚರಿಸುವನು. ಈ ಶರೀರಕ್ಕೆ ಆತನ ತಂದೆತಾಯಿಗಳೇ ಕಾರಣರಾದುದರಿಂದ ಅವರಿಗೆ ಒಳ್ಳೆಯದನ್ನು ಮಾಡುವುದಕ್ಕಾಗಿ ಸಾವಿರಾರು ತೊಂದರೆಗಳನ್ನಾದರೂ ಆತನು ಅನುಭವಿಸಬೇಕು.

ತನ್ನ ಹೆಂಡತಿಯ ವಿಷಯದಲ್ಲಿಯೂ ಹೀಗೆಯೇ. ಯಾವನೇ ಆಗಲಿ ತನ್ನ ಹೆಂಡತಿಯನ್ನು ಬಯ್ಯಕೂಡದು. ಆಕೆಯು ತನ್ನ ತಾಯಿಯೆಂದೇ ಭಾವಿಸಿ ಆಕೆಯನ್ನು ಕಾಪಾಡಬೇಕು. ಬಹಳ ದುಃಖ, ತೊಂದರೆ ಇವುಗಳಲ್ಲಿ ಸಿಕ್ಕಿಕೊಂಡಿರುವಾಗಲೂ ತನ್ನ ಹೆಂಡತಿಯ ವಿಷಯದಲ್ಲಿ ಕೋಪವನ್ನು ತೋರಿಸಲಾಗದು.

ತಾನು ಕೈಹಿಡಿದವಳ ವಿನಾ ಪರಸ್ತ್ರೀಯ ವಿಷಯವಾಗಿ ಆಲೋಚಿಸುವವನಿಗೆ ಆಕೆಯನ್ನು ಮನಸ್ಸಿನಿಂದ ಮುಟ್ಟಿದರೂ ಸಾಕು, ಕತ್ತಲು ತುಂಬಿದ ನರಕವೇ ಗತಿ.

ಗೃಹಸ್ಥನು ಸ್ತ್ರೀಯರ ಮುಂದೆ ಅನುಚಿತವಾದ ಮಾತುಗಳನ್ನಾಡಬಾರದು. "ನಾನು ಹೀಗೆ ಮಾಡಿದೆನು, ಹಾಗೆ ಮಾಡಿದೆನು" ಎಂದು ಬಡಾಯಿಕೊಚ್ಚಬಾರದು.

ಗೃಹಸ್ಥನು ತನ್ನ ಪತ್ನಿಯನ್ನು ಧನ, ವಸ್ತ್ರ, ಪ್ರೇಮ, ವಿಶ್ವಾಸ, ಸವಿನುಡಿ – ಇವುಗಳಿಂದ ಸಂತೋಷಪಡಿಸಬೇಕು. ಆಕೆಗೆ ಚಿತ್ತಕ್ಷೋಭೆಯನ್ನುಂಟುಮಾಡುವ ಕಾರ್ಯವನ್ನು ಮಾಡಕೂಡದು. ಪತಿವ್ರತೆಯಾದ ಪತ್ನಿಯ ಪ್ರೀತಿಯನ್ನು ಸಂಪಾದಿಸಿದ ಗೃಹಸ್ಥನು ತನ್ನ ಧರ್ಮದಲ್ಲಿ ಸಿದ್ಧಿ ಹೊಂದುವನು. ಆತ ಸಕಲ ಸದ್ಗುಣಸಂಪನ್ನನಾಗುವನು.

ಮುಂದೆ ಹೇಳುವುದು ಮಕ್ಕಳ ವಿಷಯದಲ್ಲಿ ಗೃಹಸ್ಥನ ಕರ್ತವ್ಯ: ನಾಲ್ಕು ವಯಸ್ಸಿನವರೆಗೆ ಮಗನನ್ನು ಪ್ರೀತಿಯಿಂದ ಸಾಕಬೇಕು. ಹದಿನಾರನೆಯ ವಯಸ್ಸಿನವರೆಗೆ ಶಿಕ್ಷಣ ಕೊಡಬೇಕು. ಇಪ್ಪತ್ತು ವಯಸ್ಸಾದಾಗ ಪುತ್ರನು ಯಾವುದಾದರೂ ಕೆಲಸದಲ್ಲಿ ನಿಯುಕ್ತನಾಗಬೇಕು. ಆಗ ತಂದೆಯು ಆತನನ್ನು ಪ್ರೀತಿಯಿಂದ ತನ್ನ ಸರಿಸಮಾನನಂತೆ ಕಾಣಬೇಕು. ಇದೇ ಪ್ರಕಾರ ಮಗಳನ್ನೂ ಸಾಕಬೇಕು. ಅತ್ಯಂತ ಜಾಗರೂಕತೆಯಿಂದ ಆಕೆಗೆ ಶಿಕ್ಷಣ ಕೊಡಬೇಕು. ಅವಳು ಮದುವೆ ಮಾಡಿಕೊಂಡಾಗ ತಂದೆಯು ಆಕೆಗೆ ಒಡವೆ ವಸ್ತುಗಳನ್ನೂ, ಧನವನ್ನೂ ಕೊಡಬೇಕು.

ತರುವಾಯ ತನ್ನ ಅಣ್ಣ ತಮ್ಮಂದಿರು, ಅಕ್ಕತಂಗಿಯರು, ಮತ್ತವರ ಮಕ್ಕಳು, ಅವರು ಬಡವರಾಗಿದ್ದಲ್ಲಿ, ಇತರ ಬಂಧುಗಳು, ಗೆಳೆಯರು, ನೌಕರರು ಇವರ ವಿಷಯದಲ್ಲಿ ಗೃಹಸ್ಥನು ತನ್ನ ಕರ್ತವ್ಯವನ್ನು ನೆರವೇರಿಸಬೇಕು. ತದನಂತರ ತನ್ನ ಹಳ್ಳಿಯ ಜನರು, ಬಡವರು, ಸಹಾಯಕ್ಕಾಗಿ ತನ್ನ ಬಳಿ ಬರುವವರು – ಇವರಲ್ಲಿಯೂ ತನ್ನ ಕರ್ತವ್ಯಗಳನ್ನು ನಡೆಯಿಸಬೇಕು. ಬೇಕಾದಷ್ಟು ಆದಾಯವಿದ್ದು ತನ್ನ ಬಂಧುಬಳಗದವರಿಗೂ ಬಡವರಿಗೂ ಏನನ್ನೂ ಕೊಡದ ಗೃಹಸ್ಥನನ್ನು ಪಶುಸಮಾನನೆಂದು ತಿಳಿಯಬೇಕು; ಆತ ಮನುಷ್ಯನಲ್ಲ.

ಅನ್ನ, ವಸ್ತ್ರ, ದೇಹಪೋಷಣೆ, ಕೇಶರಕ್ಷಣೆ ಇವುಗಳಲ್ಲಿ ಅತ್ಯಾಸಕ್ತಿ ಕೂಡದು. ಗೃಹಸ್ಥನಿಗೆ ಹೃದಯಶುದ್ಧಿ ಇರಬೇಕು. ದೇಹನೈರ್ಮಲ್ಯವಿರಬೇಕು. ಆತ ಸತತವೂ ಉದ್ಯೋಗಶೀಲನಾಗಿ ಸದಾ ಕಾರ್ಯ ಮಾಡಲು ಸನ್ನದ್ಧನಾಗಿರಬೇಕು.